# ಪ್ರವಾಸ ಪ್ರಸಂಗ – ೧

ನಾನು 'ಲೇಹ್(ಲದ್ದಾಕ್)'ಗೆ ಸೈಕಲಿಂಗ್(ಹಿಮಾಲಯನ್ ಮೌಂಟನ್ ಬೈಕಿಂಗ್–www.yhaindia.org ನೋಡಿ)ಗೆಂದು ಹೋಗಿದ್ದಾಗ ನಡೆದ ಒಂದು ಪ್ರಸಂಗ. ಲೇಹ್‌ನಿಂದ ಶ್ರೀನಗರದ ಹೆದ್ದಾರಿಯಲ್ಲಿ ಬಾಸ್ಗೋಗೆ, ಬಾಸ್ಗೋದಿಂದ ನುರ್ಲಾಗೆ, ನುರ್ಲಾದಿಂದ ಲಾಮಾಯುರುಗೆ ಮೂರುದಿನದ ನೂರಾಯಿಪ್ಪತ್ತೈದು ಕಿಲೋಮೀಟರ್‌ಗಳು, ನಂತರ ಲಾಮಾಯುರುವಿನಿಂದ ವಾಪಸ್ಸು ಲೇಹ್‌ಗೆ ಎರಡು ದಿನದ ಸೈಕಲ್ ತುಳಿತ. ಎಲ್ಲ ಸೇರಿ ಹೆಚ್ಚು ಕಡಿಮೆ ಎರಡುನೂರಾನಲವತ್ತು ಕಿಲೋಮೀಟರ್‌ಗಳ(ಐದು ದಿನಗಳಲ್ಲಿ!) ಸೈಕಲಿಂಗ್. ಸಮುದ್ರ ಮಟ್ಟದಿಂದ ಸುಮಾರು ೧೨೦೦೦ ಸಾವಿರ ಅಡಿಗಳ ಎತ್ತರದಲ್ಲಿ ಪ್ರತಿಶತ ಐವತ್ತರಿಂದ ಅರವತ್ತರಷ್ಟೇ ಆಮ್ಲಜನಕವಿದ್ದ ಗುಡ್ಡಗಾಡು ರಸ್ತೆಯಲ್ಲಿ ಸೈಕಲಿಂಗ್ ಸಕ್ಕತ್ ಖುಷಿ ಕೊಟ್ಟಿತು.

ನಮ್ಮ ತಂಡದ ಮೊಟ್ಟ ಮೊದಲ ದಿನದ ಮೊಕ್ಕಾಂ ಆದ 'ಬಾಸ್ಗೋ' ಎಂಬ ಪುಟ್ಟ ಹಳ್ಳಿಯಲ್ಲಿ ನಾವು ಉಳಕೊಂಡಿದ್ದು ಒಂದು ಮನೆಯ ಗೆಸ್ಟ್‌ಹೌಸಿನಲ್ಲಿ. ಅದರ ಒಂದು ದೊಡ್ಡ ರೂಮಿನಲ್ಲಿ ಗೋಡೆಯಿಂದ ಗೋಡೆಗೆ ದಪ್ಪನೆಯ ಹಾಸಿಗೆಗಳನ್ನು ಹಾಸಿ, ನಮಗೆ ಹೊದೆಯಲು ಸಾಕಷ್ಟು ಬೆಚ್ಚಗಿನ ಹೊದಿಕೆಗಳನ್ನು ಕೊಡಮಾಡಿದ್ದರು, ಇನ್ನೊಂದು ರೂಮು ನಮ್ಮ ಅಡಿಗೆ ಕೋಣೆಯಾಗಿ ಬದಲಾಗಿತ್ತು.

ಸಂಜೆ ಮನೆಯಂಗಳದಲ್ಲಿ ಹಾಕಿದ್ದ ತಂಬೂವಿನಡಿ ನಾವೆಲ್ಲರೂ ಒಟ್ಟಿಗೆ ಸೇರಿದ ಮೇಲೆ ನಮ್ಮ 'ಕ್ಯಾಂಪ್–ಲೀಡರ್' ನಮ್ಮ ಬೇಕುಬೇಡಗಳ ಬಗ್ಗೆ ಆ ಮನೆಯಲ್ಲಿ ಆಗಿದ್ದ ಸಿದ್ಧತೆಗಳ ಬಗ್ಗೆ ಮಾತನಾಡಿದ. ಮುಖ ಕೈಕಾಲು ತೊಳೆದುಕೊಳ್ಳುವುದಕ್ಕೆ ನಾವು ಮನೆಯ ಮುಂದೆ ಹಾದು, ಮನೆಯ ಬಲಪಕ್ಕಕ್ಕೆ ಗೋಧಿಯ ಹೊಲದ ನಡುವೆ ಹರಿಯುತ್ತಿದ್ದ ಸಣ್ಣ ಕಾಲುವೆಯ ನೀರನ್ನು ಉಪಯೋಗಿಸಬಹುದೆಂದು ಹೇಳಿದ. ಆದರೆ ಅದೇ ನೀರು ಕೆಳಗಿನ ಮನೆಗಳಿಗೆ, ಪಕ್ಕದ ಹಳ್ಳಿಗಳಿಗೆ ಹಾದು ಹೋಗಿ, ಅವರ ಅನ್ನ–ಪಾನಕ್ಕೆ ಉಪಯೋಗವಾಗುತ್ತಿದ್ದುದರಿಂದ ನಮ್ಮ 'ತೊಳೆದುಕೊಳ್ಳುವುದನ್ನು' ನೇರವಾಗಿ ಕಾಲುವೆಯ ನೀರಿನಲ್ಲಿ ಮಾಡದೇ ನಮ್ಮಲ್ಲಿದ್ದ ಲೋಟಾ–ಮಗ್ಗು–ನೀರಿನ ಬಾಟಲಿಗಳಲ್ಲಿ ನೀರನ್ನು ತುಂಬಿಕೊಂಡು ನೀರಿನಿಂದಾಚೆ ನಿಂತು ಮಾಡಿಕೊಳ್ಳಬೇಕೆಂದು ಆಜ್ಞಾಪಿಸಿದ. ನಂತರ ನಮ್ಮ ಉಳಿದೊಂದು ಮೂಲಭೂತ ಅವಶ್ಯಕತೆಯ ತಮಾಷೆಯನ್ನು ಹೇಳಿದ; ಅದೇನಂದರೆ ನಾವು ಉಳಕೊಂಡಿದ್ದ ಆ ಮನೆಯಲ್ಲಿದ್ದುದು ಕೇವಲ 'ಲದ್ದಾಕಿ ಶೌಚಾಲಯ ಮಾತ್ರ!' ಹಾಗೆಂದರೇನು ಅಂತಾ ಗೊತ್ತಿರದಿದ್ದ ನಮಗೆ ಅವನೇ ಮತ್ತೆ ವಿವರಿಸಿದ–ಅದೇನಂದರೆ, 'ಶೌಚಾಲಯದ ಕೊಠಡಿಯ ಅಡಿಯಲ್ಲಿ ಅದರಷ್ಟೇ ಅಗಲದ–ಆಳೆತ್ತರದ ಗುಂಡಿ, ಶೌಚಾಲಯದ ನೆಲದಲ್ಲಿ ಅತ್ತಿತ್ತ ನಮ್ಮ ಕಾಲಿಟ್ಟು ಕುಕ್ಕರಗಾಲಿನಲ್ಲಿ ಕೂರುವಷ್ಟು ಅಗಲದ ಚೌಕಾಕಾರದ ಸಣ್ಣ ಕಿಂಡಿ. ನಾವು ಬಹಿರ್ದೆಸೆಗೆ ಅಲ್ಲಿ ಕೂರಬೇಕು, ಎಲ್ಲ ಆದ ನಂತರ ಅಲ್ಲೇ ಇಟ್ಟಿರುವ ಕೈಗುದ್ದಲಿಯಲ್ಲಿ ಮೂಲೆಗೆ ಗುಡ್ಡೆ ಮಾಡಿರುವ ಮಣ್ಣಿನಿಂದ ಎರಡು ಗುದ್ದಲಿ ಮಣ್ಣು ಕಿಂಡಿಯೊಳಕ್ಕೆ ಹಾಕಬೇಕು! (ಲದ್ದಾಕಿ ಜನ ಶೌಚಕ್ಕೆ ನೀರನ್ನು ಉಪಯೋಗಿಸುವುದಿಲ್ಲವಂತೆ, ನೀರು ಅವರಿಗೆ ಅಶೌಚವಂತೆ!) ಅಲ್ಲಿಗೆ ನಮ್ಮ ಕೆಲಸ ಮುಗಿಯಿತು. ಆಮೇಲೆ ಬೇಕಿದ್ದರೆ ಹೊರಗಡೆಯ ಬಕೀಟಿನಿಂದ ತುಂಬಿಕೊಂಡು ತಂದಿದ್ದ (ಮೊದಲೇ ತಂದಿಟ್ಟುಕೊಂಡಿದ್ದರೆ) ಬಾಟಲಿಯ ನೀರಿನಿಂದ ನಾವು ನಮ್ಮ ಬುಡ ತೊಳೆದುಕೊಳ್ಳಬಹುದು!' ನಮ್ಮ 'ಕ್ಯಾಂಪ್–ಲೀಡರ್'ನ ಮಾತು ಕೇಳಿ ನಮಗೆ ಆ ರಾತ್ರಿಗೆ ಹೊಟ್ಟೆ ಹುಣ್ಣಾಗುವಷ್ಟು ನಗು ಬಂತಾದರೂ ಮಾರನೆಯ ದಿನ ಬೆಳಿಗ್ಗೆ ನಾಲ್ಕುಗಂಟೆಗೆಲ್ಲ ನಾವಿದ್ದ ಪರಿಸ್ಥಿತಿಯ ಗಂಭೀರತೆಯ ಅರಿವಾಯಿತು.

ಬೆಳಗಿನ ಜಾವಕ್ಕೆ ನಾನೂ ನನ್ನ ಸ್ನೇಹಿತನೂ ಮೊದಲ ದಿನದ ಸೈಕಲಿಂಗ್‌ನ ನೋವಿನಿಂದ ಭಾರ–ಭಾರವಾಗಿದ್ದ ನಮ್ಮ ದೇಹಗಳನ್ನು ಎಬ್ಬಿಸಿಕೊಂಡು ಬಹಿರ್ದೆಸೆಗೆಂದು ಗೆಸ್ಟ್‌ಹೌಸ್‌ನ ಹಿಂದಿನ ಲದ್ದಾಕಿ ಶೌಚಾಲಯದ ಬಳಿ ಬಂದರೆ – ಅಲ್ಲಿ ಆಗಲೇ ತಂಡದ ಹುಡುಗರ ಸರತಿ ಸಾಲು! ಮಹರಾಷ್ಟ್ರದ ಧುಲಿಯಾದಿಂದ ಬಂದಿದ್ದ ಪುರೋಗಾಮಿ ರೈತ 'ವಿರೇಂದರ್', ಅವನ ಹಿಂದೆ ಮೈಸೂರಿನಿಂದ ಬಂದಿದ್ದ ಆ ಹಿರಿಯರು. ಅವರಿಬ್ಬರ ನಂತರ ನಮ್ಮ ಸರದಿ!

ಹನ್ನೆರಡು ಜನರ ನಮ್ಮ ಸೈಕಲಿಂಗ್ ತಂಡದಲ್ಲಿ ಏಳು ಜನ ಕನ್ನಡಿಗರೇ ಇದ್ದೆವು–ನಾನೂ ಮತ್ತು ನನ್ನದೇ ಹೆಸರಿನ ನನ್ನ ಸ್ನೇಹಿತ ಹಾಗೂ ಮೈಸೂರಿನಿಂದ ಬಂದಿದ್ದ ಐವರು ಸ್ನೇಹಿತರ ಗುಂಪಿನಿಂದಾಗಿ ನಮ್ಮ ತಂಡದಲ್ಲಿ ಸವಿಗನ್ನಡ, ಕವಿಗನ್ನಡ, ಬೈಗನ್ನಡ (ಕನ್ನಡದ ಬೈಗುಳ!) ಓತಪ್ರೋತವಾಗಿ ಹರಿದಾಡುತ್ತಿತ್ತು. ಮೈಸೂರಿನಿಂದ ಬಂದಿದ್ದ ಐವರು ಜನ ಸ್ನೇಹಿತರ ಅಧಿಕೃತ ವಕ್ತಾರರಾಗಿದ್ದ ಈ ಹಿರಿಯರು (ಅವರ ಮಾತು, ಅವರ ಬಕ್ಕತಲೆಯಂಚಿನಲ್ಲಿ ಅಳಿದುಳಿದಿದ್ದ ಬಿಳಿಕೂದಲು ಕಂಡು ನಾನು ಅವರು 'ಹಿರಿಯರೇ' ಅಂದುಕೊಂಡಿದ್ದೆ. ಆದರೆ ಎರಡನೇ ದಿನವೇ 'ವಯಸ್ಸು ಊಹಿಸುವ' ಮಾತುಕತೆಯಲ್ಲಿ ನಾನು

ಅವರಿಗಿಂತ ಕೇವಲ ನಾಲ್ಕು ವರ್ಷ ಚಿಕ್ಕವನೆಂದು ಗೊತ್ತಾಯಿತು!) ಬಂದ ದಿನವೇ ನನ್ನ ಮತ್ತು ನನ್ನ ಸ್ನೇಹಿತನ ಹೆಸರು ಒಂದೇ ಎಂದು ಗೊತ್ತಾದಾಗ ನಮ್ಮ ಹೆಸರು ಕೂಗಿ ನಮ್ಮನ್ನು ಬೇಸ್ತು ಬೀಳಿಸುವ ಹಟಕಟ್ಟಿದ್ದರು. ಎಲ್ಲದರ ಬಗ್ಗೆ, ಎಲ್ಲರ ಬಗ್ಗೆ ಅಧಿಕಾರಯುತವಾಗಿ ಮಾತನಾಡುತ್ತ, ನಮ್ಮೆಲ್ಲರನ್ನೂ ಗೇಲಿ ಮಾಡುತ್ತ, ಬೇಡಾದಾಗ ಜಾಣ ಕಿವುಡು ನಟಿಸುತ್ತ, ಕೇವಣಿ ಸಿಕ್ಕದಾದಾಗ ನಮ್ಮ ಗುಂಪಿನಿಂದ ಜಾರಿಕೊಳ್ಳುತ್ತ ಇಡೀ ಗುಂಪಿನಲ್ಲಿ ಹೆಸರುವಾಸಿಯಾಗಿದ್ದರು. ಶೌಚಕ್ಕೆ ಈ 'ಹಿರಿಯರ' ಸರದಿ ನನ್ನ ಮುಂದಿತ್ತು. ನಾನು ನನ್ನ ಸ್ನೇಹಿತನೆಡೆಗೆ ನೋಡಿದೆ. ಅವನ ಹೊಟ್ಟೆಯ ಪರಿಸ್ಥಿತಿ ಅವನ ಮುಖದಲ್ಲಿ ಎದ್ದು ಕಾಣುತ್ತಿತ್ತು!

"ಶಿವೂ, ನಾವು ಹೊರಗಡೆ ರಸ್ತೆಯಾಚೆ ಕಕ್ಕಸ್ಸಿಗೆ ಹೋಗಬಹುದಲ್ಲಾ?"–'ಹಿರಿಯರ' ಮುಖದಲ್ಲೂ ಅದೇ ಪರಿಸ್ತಿತಿಯಿದ್ದುದು ಅವರ ಈ ಮಾತಿಗೆ ಕಾರಣವಾಗಿತ್ತು! ಅವರ ಗೊಂದಲದ ಗೇಲಿಗೊಳಗಾಗದಂತೆ ನಾನು ಸುಮ್ಮನಿದ್ದೆ. ನನ್ನ ಸ್ನೇಹಿತ ನನ್ನನ್ನು ನೋಡಿ ನುಡಿದ, "ಹೌದಮ್ಮಾ, ಹೊರಗಡೆ ರಸ್ತೆ ಬದಿಯಲ್ಲಿ ಕೂತ್ಕೋಬಹುದು!".

"ಹೇಗಿದ್ರೂ ಈ ದಾರಿಯಲ್ಲಿ ಬೆಳಗಿನ ಜಾವಕ್ಕೆಲ್ಲ ವಾಹನಗಳು ಓಡಾಡಲಿಕ್ಕಿಲ್ಲ. ನಾವಿದ್ದ ಮನೆಯ ಹೊರಗಡೆ ನೆನ್ನೆ ಬಂದ ರಸ್ತೆಯಲ್ಲೇ ಸ್ವಲ್ಪ ಕೆಳಕ್ಕೆ ಸಾಗಿ, ರಸ್ತೆಯ ಬದಿಯಲ್ಲಿದ್ದ ಮಣ್ಣ ದಿಬ್ಬದ ಹಿಂದೆ ನಾವು ನಮ್ಮ ಕೆಲಸ ಮುಗಿಸಿಕೊಳ್ಳಬಹುದು!"–ಮತ್ತೆ ಆ 'ಹಿರಿಯರೇ' ಉಪಾಯ ಸೂಚಿಸಿದರು.

"ಸರಿ, ತೊಳ್ಕೊಳ್ಳೋಕೆ?"–ನಾನು ಸಮಸ್ಯೆಯನ್ನು ಮುಂದಿಟ್ಟೆ.

ಹಿತ್ತಲಿನಲ್ಲಿ ಮೋಟುಗೋಡೆಯ ಮೇಲೆ ಫೆರೆಕ್ಸ್ ಟಿನ್ನಿನ ತರಹದೊಂದು ಚೆನ್ನಾದ ಒಂದು ಡಬ್ಬ ಇತ್ತು. ಅದನ್ನು ಎತ್ತಿಕೊಂಡವರೇ 'ಹಿರಿಯರು', "ತಗೋಳಿ, ಇದು ತೊಳ್ಕೋಳೋಕೆ ಆಗುತ್ತೆ!" ಅಂದರು.

ನಾನು ನನ್ನ ಸ್ನೇಹಿತನಿಗೆ ಮತ್ತೆ ನೆನಪಿಸಿದೆ, "ನಾವು ಕಾಲುವೆಯಲ್ಲಿ ನೇರವಾಗಿ ತೊಳ್ಕೊಳೋ ಹಾಗಿಲ್ಲ ಶಿವೂ!"

"ಸರಿ ಬಾರಮ್ಮಾ, ಕಕ್ಕ ಮಾಡಿಯಾದ ಮೇಲೆ ಡಬ್ಬದಲ್ಲಿ ನೀರು ತೆಗೆದುಕೊಂಡು, ಬದುವಿನ ಹೊರಗೆ ತೊಳೆದು ಕೊಳ್ಳೋಣ!"

ಆ ನಂತರ ನಾವ್ಮೂವರೂ ಕತ್ತಲಿನಲ್ಲೇ ಮನೆಯ ಪ್ರಾಕಾರದ ಬಾಗಿಲು ದಾಟಿ, ನಿನ್ನೆ ಬಂದಿದ್ದ ರಸ್ತೆಯಗುಂಟ ಕೆಳಕ್ಕೆ ನಡೆದವು. ಸ್ವಲ್ಪ ದೂರದ ನಂತರ ರಸ್ತೆಯ ಪಕ್ಕದ ಮಣ್ಣದಿಬ್ಬದ ಹಿಂದೆ ಕಣ್ಣಳತೆಯ ಅಂತರದಲ್ಲಿ ಸಾಲಾಗಿ, ಬೆಳಗಿನ ಕತ್ತಲಲ್ಲಿ ಬಹಿರ್ದೆಸೆಗೆ ಕುಳಿತೆವು.

ನನ್ನ ಸ್ನೇಹಿತ ಮತ್ತೊಂದು ಉಪಾಯ ಸೂಚಿಸಿದ. ಹೇಗಿದ್ದರೂ ನಾವು ಕುಳಿತುಕೊಂಡಿದ್ದು ಮಣ್ಣದಿಬ್ಬದ ಹಿಂದೆ ತಾನೇ. ನಮ್ಮ ಕೆಲಸ ಮುಗಿದ ನಂತರ ಸರಿಯಾಗಿ ಮಣ್ಣನ್ನು ಎಳೆದುಬಿಟ್ಟು ಹಸನು ಮಾಡಿಬಿಟ್ಟರೆ 'ಲದ್ದಾಕಿ' ಸಂಪ್ರದಾಯಕ್ಕೂ ಧಕ್ಕೆ ಬರುವುದಿಲ್ಲವೆಂದು ಹೇಳಿದ.

'ಹಿರಿಯರು' ಅದನ್ನೇ ಹೇಳಿದರು, "ನಾನೂ ಅದನ್ನೇ ಯೋಚಿಸ್ತಾ ಇದ್ದೆ. ಬೆಳಗಾಗೋ ಮುಂಚೆ ಈ ಕಡೆ ಸುಮ್ಮನೆ ವಾಕಿಂಗ್ ಬಂದು ಸರಿಯಾಗಿ ಮಣ್ಣು ಹಾಕಿ ಹೋಗಬೇಕು"

"ಬೆಳಗಿನ ತನಕ ಕಾಯೋದ್ಯಾಕೆ? ನನಗಂತೂ ಕತ್ತಲಲ್ಲೂ ಚೆನ್ನಾಗಿ ಕಾಣ್ತಾ ಇದೆ. ಎಲ್ಲ ಆದ ಮೇಲೆ ಈಗ್ಲೇ ಚೆನ್ನಾಗಿ ಮಣ್ಣು ಮುಚ್ಚಿ ಹೋದರಾಯ್ತು, ಅಲ್ವೇನಮ್ಮಾ?" ಸ್ನೇಹಿತ ನನ್ನ ಅಭಿಪ್ರಾಯ ಕೇಳಿದ. ನಾನು ಕತ್ತಲಲ್ಲೇ ಹೂಂಗುಟ್ಟಿದೆ.

'ಹಿರಿಯರು' ತಮ್ಮ ಪಟ್ಟು ಬಿಡದೇ, ಒತ್ತಿ ಅದೇ ರಾಗ ಮೀಟಿದರು, "ಆದ್ರೂ ಶಿವೂ, ಬೆಳಗ್ಗೆ ಬೆಳಕಾದ ಮೇಲೆ ಒಮ್ಮೆ ಈ ಕಡೆ ಬಂದು ಸರಿಯಾಗಿ ಮಣ್ಣು ಮುಚ್ಚಿ ಹೋಗಬೇಕು. ಇಲ್ಲಾಂದ್ರೆ ಸುಮ್ನೆ ಪ್ರಾಬ್ಲಮ್ಮು!"

ನಾವಿಬ್ಬರೂ ಏನೂ ಹೇಳಲಿಲ್ಲ. ಸ್ವಲ್ಪ ಸಮಯದ ನಂತರ ನಾನು ಎದ್ದೆ. ನನ್ನ ತೊಡೆಗಳು ಮೊದಲ ದಿನದ ಸೈಕಲಿಂಗ್‌ನಿಂದಾಗಿಯೂ ಕುಕ್ಕರಗಾಲಿನಲ್ಲಿ ಕುಳಿತಿದ್ದುದರಿಂದಲೂ ತುಂಬಾ ನೋಯುತ್ತಿದ್ದವು. ಮಣ್ಣನ್ನೆಲ್ಲ ಚೆನ್ನಾಗಿ ಎಳೆದು ಮುಚ್ಚಿ ಮೆಲ್ಲನೆ ಡಬ್ಬ ತೆಗೆದುಕೊಂಡು, ಕೆಳಗೆ ಹರಿಯುತ್ತಿದ್ದ ಕಾಲುವೆಯಲ್ಲಿ ನೀರನ್ನು ಮೊಗೆದುಕೊಂಡು, ಬದುವಿನಾಚೆಗೆ ನನ್ನ ಕೆಲಸ ಮುಗಿಸಿದೆ ಹಾಗೂ ಮತ್ತೊಮ್ಮೆ ನನ್ನ ಸ್ನೇಹಿತನಿಗೆ ಸ್ಪಷ್ಟವಾಗಿ ಲದ್ದಾಕಿ–ಕಾನೂನುಬದ್ಧವಾಗಿ 'ತೊಳೆದುಕೊಳ್ಳುವುದರ' ವಿಧಿ–ವಿಧಾನದ ಬಗ್ಗೆ ಜ್ಞಾಪಿಸಿದೆ.

ಅಷ್ಟರಲ್ಲಿ ಈ 'ಹಿರಿಯರ' ಕೆಲಸ ಮುಗಿಯಿತೂಂತ ಅನಿಸುತ್ತೆ. ನೇರವಾಗಿ ತೊರೆಯ ಬಳಿಗೆ ಬಂದವರೇ ಇದೂವರೆಗೂ ನಾವುಗಳು ಆಡಿದ್ದ ಮಾತುಗಳು ತನಗೆ ಕೇಳಿಸಿಯೇ ಇಲ್ಲ, ಕೇಳಿಸಿದ್ದರೂ ತನಗೆ ಅನ್ವಯಿಸುವುದೇ ಇಲ್ಲವೆಂಬಂತೆ ನೇರವಾಗಿ ನೀರಿನೊಳಕ್ಕೆ ಇಳಿದು, ತಮ್ಮ ಬುಡವನ್ನದ್ದಿ ಸಶಬ್ದವಾಗಿ ತೊಳೆದುಕೊಂಡರು. ನಂತರ ಬಂದ ನನ್ನ ಸ್ನೇಹಿತ

ನನ್ನಂತೆಯೇ ಡಬ್ಬದಿಂದ ಕಾಲುವೆಯ ನೀರು ತೆಗೆದುಕೊಂಡು ಬದುವಿನಾಚೆ ತನ್ನ 'ತೊಳೆಯುವಿಕೆ'ಯನ್ನು ಮುಗಿಸಿದ. ಮೂವರೂ ಮತ್ತೆ ರಸ್ತೆಗೆ ಬಂದೆವು. 'ಹಿರಿಯರು' ತುಂಬಾ ಕಾಳಜಿಯಿಂದ ಹೇಳಿದರು, "ಶಿವ್ರೂ, ಬೆಳ್ಗಾಗೋದ್ರೊಳ್ಗೆ ಈ ಕಡೆ ಮತ್ತೊಮ್ಮೆ ಬಂದು ಸರಿಯಾಗಿ ಮಣ್ಣು ಹಾಕಬೇಕು ಕಣ್ರೀ!" ನನ್ನ ಸ್ನೇಹಿತ ಕೇಳಿದ, "ಈಗ ಹಾಕಲಿಲ್ವೇ?"

"ಹಾಕಿದೀನಿ, ಆದ್ರೂ ಬೆಳಕಾದ ಮೇಲೆ ಬಂದು ಎಲ್ಲ ಸರಿಯಾಗಿದಿಯಾ ಅಂತ ನೋಡಬೇಕು ಅಂದೆ!" ನಾವಿಬ್ಬರೂ ಮುಂದೆ ಏನನ್ನೂ ಮಾತನಾಡಲಿಲ್ಲ. ಆನಂತರ ನಾವು ಹಲ್ಲು ತಿಕ್ಕಿ, ಮುಖ ತೊಳೆಯುವಾಗಲೂ ಇವರು ನಮ್ಮೆಲ್ಲರಂತೆ ಮಾಡದೇ, ಹರಿಯುತ್ತಿದ್ದ ನೀರಿನ ಕಾಲುವೆಯೊಳಗೇ ನಿಂತು, ಬಾಯಿ ಮುಕ್ಕಳಿಸಿ, ಕಾಲುವೆಗೇ ಉಗಿದು, ಮುಖ ಮಾರ್ಜನವನ್ನೆಲ್ಲ ಮುಗಿಸಿಕೊಂಡರು!

----

ಬೆಳಗಿನ ಆರುಗಂಟೆಗೆಲ್ಲ ನಮ್ಮ ಗೆಸ್ಟ್‌ಹೌಸಿನ ಮುಂದೆ ತಂಬೂವಿನಡಿಯಲ್ಲಿ ನಾನೂ ನನ್ನ ಸ್ನೇಹಿತನೂ ಬೆಳಗಿನ ಚಹಾ ಕುಡಿಯುತ್ತ ಕುಳಿತಿದ್ದಾಗ 'ಹಿರಿಯರು' ರಸ್ತೆಯಗುಂಟ ನಡೆದು ಹೋಗುತ್ತಿದ್ದುದು ಕಾಣಿಸಿತು. ನಾನು ನನ್ನ ಸ್ನೇಹಿತನಿಗೆ ಅದನ್ನು ತೋರಿಸಿದೆ. ನಾವಿಬ್ಬರೂ ನೋಡುತ್ತಿದ್ದಂತೆಯೇ ಅವರು ರಸ್ತೆಯಲ್ಲಿ ನಡೆದು, ನಾವು ಬೆಳಿಗ್ಗೆ ಕುಳಿತಿದ್ದ ದಿಬ್ಬದ ಬಳಿ ಸಾರಿ, ತಮ್ಮ ಶೂಸುಗಾಲಿನಿಂದ ಚೆನ್ನಾಗಿ ಮಣ್ಣು ತಳ್ಳಿ ತಾನು ಕತ್ತಲಲ್ಲಿ ಮಾಡಿದ್ದನ್ನು ಬೆಳಕಿನಲ್ಲಿ ಚೆನ್ನಾಗಿ ಮುಚ್ಚಿ ಹಾಕುತ್ತಿದ್ದರು. ಎಲ್ಲವೂ ಸುಸೂತ್ರವಾಗಿ ನಡೆದ ತೃಪ್ತಿ ಅವರ ಮುಖದಲ್ಲಿ ಎದ್ದು ಕಾಣುತ್ತಿತ್ತು. ಅಲ್ಲೇ ಕೆಳಗೆ ಕಾಲುವೆಯಲ್ಲಿ ತಿಳಿ ನೀರು ಪಕ್ಕದ ಹಳ್ಳಿಯೆಡೆಗೆ ಮೆಲ್ಲನೆ ಹರಿಯುತ್ತಿತ್ತು.

## ಹ್ಯಾವ್ ಎ ನೈಸ್ ಡೇ

**ಶಿವಕುಮಾರ ಕೆ. ಎಸ್.** shivuks@gmail.com

---

ಲೇಹ್‌ನ ವಿಮಾನ ನಿಲ್ದಾಣದಲ್ಲಿ, ಮೂರು–ಮೂರು ಬಾರಿಯ 'ಭದ್ರತಾ ತಪಾಸಣೆ' ಮುಗಿಸಿಕೊಂಡು ವಿಮಾನವೇರಲು ಕಾಯುತ್ತಿದ್ದಾಗ ಅಲ್ಲೇ ಇದ್ದ ಫಲಕವೊಂದು ಕಣ್ಣಿಗೆ ಬಿತ್ತು. **'ಲದ್ದಾಕಿ ಸ್ಟೈಲ್ ಟಾಯ್ಲೆಟ್'!** ಆದರೆ ಯಾಕೋ ಏನೋ ಆ ಫಲಕದ **'ಲದ್ದಾಕಿ ಸ್ಟೈಲ್'** ಎಂಬ ಪದಗಳ ಮೇಲೆ ಬಣ್ಣ ಬಳಿದು ಮುಚ್ಚಿ ಹಾಕಿ ಆ ಶೌಚಾಲಯದ ಬಾಗಿಲು ಇರಬೇಕಾಗಿದ್ದ ಕಡೆ ತಡೆಗೋಡೆಯಂಥದನ್ನು ಎಬ್ಬಿಸಿ, ಕುರ್ಚಿಗಳನ್ನು ಹಾಕಿ **'ಲದ್ದಾಕಿ ಸ್ಟೈಲ್ ಟಾಯ್ಲೆಟ್'**ನ್ನು ಕೊನೆಗಾಣಿಸಿದ್ದರು!